ವಾರದ ಪತ್ರ

## ಸ್ಫೂರ್ತಿದಾಯಕ ಮಾತುಕತೆ



ಚಂದನ ವಾಹಿನಿಯಲ್ಲಿ ಇತ್ತೀಚೆಗೆ ಪ್ರಸಾರವಾದ 'ವಾರದ ಅತಿಥಿ' ಕಾರ್ಯಕ್ರಮ ಅದ್ಭುತವಾಗಿತ್ತು. ಅಂದಿನ ಅತಿಥಿಯಾಗಿದ್ದ ಗುರುರಾಜ್ ಕರಜಗಿ ಅವರ ಬದುಕಿನ ಚಿತ್ರಣವನ್ನು ಒಂದು ಗಂಟೆ ಅವಧಿಯಲ್ಲಿ ಪರಸ್ಪರ ಮಾತುಕತೆ ಮೂಲಕ ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದರು.

ಅವರ ಬದುಕಿನ ಅನೇಕ ಘಟನೆಗಳು ನಮಗೆ ಸ್ಫೂರ್ತಿದಾಯಕವಾಗಿವೆ. ನಿರೂಪಕರು ಕೂಡ ಅಚ್ಚುಕಟ್ಟಾಗಿ ಕಾರ್ಯಕ್ರಮ ನಿರೂಪಿಸಿದರು. ಅಸೂಯೆ, ದ್ವೇಷ, ನಕಾರಾತ್ಮಕ ಭಾವನೆಯನ್ನು ಬಿತ್ತುವ, ಯುವ ಪೀಳಿಗೆಯ ದಾರಿ ತಪ್ಪಿಸುವ ಕಾರ್ಯಕ್ರಮಗಳನ್ನು ನೋಡುವ ಬದಲು ಸಮಾಜಕ್ಕೆ ಆರೋಗ್ಯಕರ ಕಾರ್ಯಕ್ರಮಗಳನ್ನು ನೀಡುವುದನ್ನು ನೋಡಬೇಕು ಎಂದು ಅನಿಸಿತು.

—ಶಾಲಿನಿ ಮನೋಹರ್, ಬೆಂಗಳೂರು

## ತಪ್ಪು ಮಾಹಿತಿ ತಪ್ಪಲಿ

ಚಂದನ ವಾಹಿನಿಯಲ್ಲಿ 'ಥಟ್ ಅಂತ ಹೇಳಿ' ಕಾರ್ಯಕ್ರಮ ಹಲವು ವರ್ಷಗಳಿಂದ ಚೆನ್ನಾಗಿ ಮೂಡಿ ಬರುತ್ತಿದೆ. ಇತ್ತೀಚಿನ ದಿನಗಳಲ್ಲಿ ಕೆಲವು ಕಂತುಗಳಲ್ಲಿ ಒಬ್ಬ ಸ್ಪರ್ಧಿಯೂ ಸುಲಭದ ಕೂಡು ಲೆಕ್ಕವನ್ನೂ ಬಿಡಿಸುವುದಿಲ್ಲ. ಇದು ಖೇದದ ಸಂಗತಿ.

ಇತ್ತೀಚಿನ ಒಂದು ಕಂತಿನಲ್ಲಿ ಮಹಿಳಾ ಸ್ಪರ್ಧಿ ತಾವು ಶಿವಮೊಗ್ಗ ಜಿಲ್ಲೆ ಹೊಸನಗರ ತಾಲ್ಲೂಕಿನ ನಗರ ಗ್ರಾಮದವರು ಎನ್ನುವ ಬದಲು 'ಹೊಸನಗರ ಜಿಲ್ಲಾ ಶಿವಮೊಗ್ಗ ತಾಲ್ಲೂಕಿನ ನಗರ ಗ್ರಾಮ' ಎಂದು ಹೇಳಿದರು. ಇದು ಯಾರ ಗಮನಕ್ಕೂ ಬರಲಿಲ್ಲ. ಗಡಿಬಿಡಿ ಅಥವಾ ಕ್ಯಾಮೆರಾ ಎದುರು ಭಯದಿಂದ ಸ್ಪರ್ಧಿ ಹಾಗೆ ಹೇಳಿರಬಹುದು. ಆದರೆ ಅದನ್ನು ತಿದ್ದುವ ಅವಕಾಶ ಇತ್ತು. ಇಲ್ಲವೇ ಮಾಹಿತಿಯನ್ನು ಎಡಿಟ್ ಮಾಡಬಹುದಿತ್ತು. ಲೈವ್ ಕಾರ್ಯಕ್ರಮ ಆದರೆ ಏನೂ ಮಾಡಲು ಸಾಧ್ಯ ಇಲ್ಲ. ರೆಕಾರ್ಡೆಡ್ ಕಾರ್ಯಕ್ರಮದಲ್ಲಿ ಹೀಗಾಗುವುದು ಅಕ್ಷಮ್ಯ.

ಪದಬಂಧ ಹಾಗೂ ಚಟ್ ಪಟ್ ಚಿನಕುರಳಿ ಪ್ರಶ್ನೆಯಲ್ಲಿ ಅಕ್ಷರ ಒಡೆದು ತಲಗಟ್ಟುಗಳು ದೂರ ಆಗಿವೆ. ಇದನ್ನು ನೋಡಲು ಬೇಸರ. ದಯವಿಟ್ಟು ಈ ಕಡೆ ಗಮನ ಹರಿಸಿ.

—ಅರುಣ್ ಕೆ.ಎಸ್., ಬೆಂಗಳೂರು

## ನವರಾತ್ರಿ ಅಡುಗೆ

ಸ್ಟಾರ್ ಸುವರ್ಣದ 'ಬೊಂಬಾಟ್ ಭೋಜನ'ದಲ್ಲಿ ನವರಾತ್ರಿ ಸಂದರ್ಭ 'ಆಹಾರ ಆರೋಗ್ಯ' ವಿಭಾಗ ಕಾರ್ಯಕ್ರಮ ಚೆನ್ನಾಗಿತ್ತು. ಕಾರ್ಯಕ್ರಮ ಚೆನ್ನಾಗಿತ್ತು. ಡಾಕ್ಟರ್ ಗೌರಿ ಸುಬ್ರಹ್ಮಣ್ಯ ಅವರು ಪ್ರತಿದಿನ ಯಾವ ದೇವಿಯನ್ನು ಪೂಜಿಸಬೇಕು, ಆ ದೇವಿಯ ನೈವೇದ್ಯಕ್ಕೆ ಮಾಡಬೇಕಾದ ಪದಾರ್ಥ ಹಾಗೂ ದೇವಿಯ ಮಹಾತ್ಮೆಯ ಕತೆಯನ್ನೂ ತಿಳಿಸಿ ಕೊಡುತ್ತಿದ್ದರು. ಆರೋಗ್ಯಪೂರ್ಣ ಆಹಾರ ಪರಿಚಯಿಸುವ ಜೊತೆ ಆರಾಧನೆಯ ಬಗೆಯನ್ನೂ ಹೇಳುತ್ತಿದ್ದರು. ಒಟ್ಟಾರೆ ಒಳ್ಳೆಯ ಮಾಹಿತಿಯನ್ನು ಕಾರ್ಯಕ್ರಮದ ಮೂಲಕ ತಿಳಿಸಿಕೊಟ್ಟರು.

—ಕೆ.ಎಸ್. ಸವಿತ, ಬೆಂಗಳೂರು

## ಹಳೆ ವೈಭವ ಮರಳಲಿ

ಕೊರೊನಾ ನಂತರ ಕನ್ನಡ ಸೇರಿದಂತೆ ಬೇರೆ ಬೇರೆ ಭಾಷೆಗಳಲ್ಲಿ ಹೊಸದಾಗಿ ರಿಯಾಲಿಟಿ ಶೋಗಳ ಚಿತ್ರೀಕರಣ ಮಾಡುತ್ತಾ ಇದ್ದಾರೆ.

ಕನ್ನಡದ ವಾರಾಂತ್ಯದ ಶೋಗಳಾದ 'ವೀಕೆಂಡ್ ವಿತ್ ರಮೇಶ್', 'ಫ್ಯಾಮಿಲಿ ಪವರ್', 'ಸೂಪರ್ ಮಿನಿಟ್', 'ಕನ್ನಡದ ಕೋಟ್ಯಧಿಪತಿ', 'ಚಿನ್ನರ ಚಿಲಿಪಿಲಿ', 'ಭೋಟಾ ಚಾಂಪಿಯನ್'ನಂತಹ ಕಾರ್ಯಕ್ರಮಗಳು ಮತ್ತೆ ಪ್ರಸಾರವಾಗಲಿ. ಹಳೆಯ ವೈಭವ ಮತ್ತೆ ಮರಳಿ ಬರಲಿ.

—ಎನ್. ವೈದೇಹಿ, ಮೈಸೂರು

## ಅಂದವನ್ನೆಲ್ಲ ಬಿಂದು ಮಸಿ ನುಂಗಿತೇ?

ಕಲರ್ಸ್ ಕನ್ನಡ ವಾಹಿನಿಯ ದೀರ್ಘಕಾಲದ ವೀಕ್ಷಕಿ ನಾನು. ಅದರಲ್ಲಿ ಪ್ರಸಾರವಾಗುತ್ತಿರುವ ಧಾರಾವಾಹಿಗಳು ಮತ್ತು ಅನುಬಂಧ ಅವಾರ್ಡ್ ಬಗ್ಗೆ ಹೇಳುವುದಾದರೆ, ವೀಕ್ಷಕರ ಸಹನೆ ಮತ್ತು ತಾಳ್ಮೆಯನ್ನು ಪರೀಕ್ಷಿಸುತ್ತಿದ್ದಾರೆ ಎನಿಸುತ್ತದೆ.

'ಕನ್ನಡತಿ'ಯ ವರೂವಿನ ಪಾತ್ರ ಪೋಷಣೆ ಸಮರ್ಪಕವಾಗಿ ಆಗುತ್ತಿಲ್ಲ. ಇತ್ತೀಚೆಗಂತೂ ಅವಳ ಅವಶ್ಯಕತೆ ಕಥೆಗೆ ಎಳ್ಳೂ ಪೂರಕ ಅನಿಸುವುದಿಲ್ಲ. ಒಟ್ಟಾರೆ ಕಥಾ ಹಂದರ ಸಭ್ಯತೆಯ ಚೌಕಟ್ಟಿನಲ್ಲಿ ಇದೆ. ಸೂತ್ರಧಾರಿಗಳು ಮತ್ತು ಪಾತ್ರಧಾರಿಗಳು ಇದನ್ನು ಅರಿತು ಸಭ್ಯತೆಯ ಎಲ್ಲೆ ಒಳಗೆ ಪಾತ್ರ ಚಿತ್ರವಣವನ್ನು ರೂಪಿಸಿದರೆ ನೋಡುಗರು ಮುಜುಗರ ಪಡುವ ಅಗತ್ಯ ಬರುವುದಿಲ್ಲ.

ಅನುಬಂಧ ಪ್ರಶಸ್ತಿ ಸಮಾರಂಭದಲ್ಲಿ ಅದಕ್ಕೆ vootನಲ್ಲಿ ಅತಿ ಹೆಚ್ಚು ವೀಕ್ಷಣೆಗೆ ಒಳಗಾಗುತ್ತಿರುವ ಧಾರಾವಾಹಿ ಎಂದು 'ಕನ್ನಡತಿ'ಗೆ ಪ್ರಶಸ್ತಿ ನೀಡಲಾಗಿದೆ. ನನ್ನ ಸಂಬಂಧಿಕರೊಬ್ಬರನ್ನು ಅದು ಹೇಗೆ ಎಂದು ಕೇಳಿದಾಗ, ಕಥೆಯ ಉದ್ದಕ್ಕೂ ವರೂಳನ್ನು ಸಹಿಸಿಕೊಳ್ಳಲು ಸಾಧ್ಯವೇ ಇಲ್ಲ.

Vootನಲ್ಲಿ ನೋಡುವಾಗ ಅವಳು ಬರುವ ಸನ್ನಿವೇಶವನ್ನು ದಾಟಿ ಮುಂದಕ್ಕೆ ಹೋಗಲು ಅನುಕೂಲವಿದೆ ಎಂದರು. ಅನುಬಂಧ ಬಹಳ ನಿರೀಕ್ಷೆಗಳನ್ನು ಹುಟ್ಟಿಸಿತ್ತು. ಆದರೆ ಇದರಿಂದ ನಿರಾಸೆ ಆಯಿತು. ಎಲ್ಲ ಚಂದವನ್ನೂ ಒಂದು ಮಸಿ ನುಂಗಿತು ಎನ್ನುವ ಹಾಗೆ ನಿರೂಪಕಿಯ ವೇಷಭೂಷಣ ಹಿಡಿಸಲಿಲ್ಲ.

—ಗಾಯತ್ರಿ ಮೂರ್ತಿ

## ಒಳ್ಳೆಯ ಅಳಿಯ ಹೇಗಾದ?

ಕಲರ್ಸ್ ಕನ್ನಡದ 'ಮಂಗಳ ಗೌರಿ ಮದುವೆ'ಯಲ್ಲಿ ರಾಜೀವ ಮತ್ತು 'ಗೀತಾ'ದ ವಿಜಯ್‌ಗೆ ಮನೆ ಮೆಚ್ಚಿದ ಅಳಿಯ ಪ್ರಶಸ್ತಿ ಸಿಕ್ಕಿದೆ. ಈ ಪ್ರಶಸ್ತಿಗೆ ಯಾರ ಹೆಸರನ್ನಾದರೂ ಪರಿಗಣಿಸುವಾಗ ಸೂಕ್ತ ಮಾನದಂಡ ಎನ್ನುವುದು ಏನಾದರೂ ಇರಬೇಕಲ್ಲವೇ.

ಮಂಗಳಾ – ರಾಜೀವ ಈ ಜೋಡಿ ಒಂದೇ ಒಂದು ದಿನವೂ ಗಂಡ ಹೆಂಡತಿಯಾಗಿ ಬಾಳಲಿಲ್ಲ. ಅವನು ಒಂದು ದಿನವೂ ಹೆಂಡತಿಯ ಬಗ್ಗೆ ಕಾಳಜಿ ಮಾಡಲಿಲ್ಲ. ಇನ್ನು ಒಳ್ಳೆಯ ಅಳಿಯ ಹೇಗಾದ? ಹಾಗೆ ನೋಡಿದರೆ ಯದುವೀರ್, ಮಿಥುನ್, ಸಾಕೇತ್, ಅನಿಕೇತ್, ಶಿವರಾಮ, ಅಗಸ್ತ್ಯ ಇವರಲ್ಲಿ ಯಾರಾಗಿದ್ದರೂ ಅರ್ಥಪೂರ್ಣ ಎನಿಸುತಿತ್ತು.

—ಪ್ರತಿಭಾ ಶ್ರೀನಿವಾಸ್

## ಸುಬ್ಬನ ಹುಚ್ಚುತನ

ಝೀ ಕನ್ನಡದ 'ಜೊತೆ ಜೊತೆಯಲಿ' ಆರ್ಯ ಸಾಹೇಬರ ಕುಟುಂಬ ಎಲ್ಲಿ? ಗುಮಾಸ್ತ ಸುಬ್ಬುವಿನ ಕುಟುಂಬ ಎಲ್ಲಿ? ಏನೋ ಹುಡುಗಿ ಚೆನ್ನಾಗಿದ್ದಾಳೆಂದು ಆರ್ಯ ಕುಟುಂಬದವರು ತಮ್ಮ ಯೋಗ್ಯತೆಗೆ ತಕ್ಕಂತೆ ಅನುಳನ್ನು ಮದುವೆಯನ್ನು ಮಾಡಿಕೊಂಡರು. ಸುಬ್ಬ ತನ್ನ ಮನೆ ಮಾರಿದ್ದರಿಂದ ಬಂದ ಹಣವನ್ನು ಆರ್ಯನ ಮನೆಯಲ್ಲಿ ಇಡುವುದು ಮೂರ್ಖತನ ಅಲ್ಲವೇ? ದೊಡ್ಡ ಮೊತ್ತ ಬಂದಮೇಲೆ ಹೆಂಡತಿಗಾಗಿ ಒಂದು ನೆಲೆಯನ್ನೂ ಮಾಡದಿರುವುದು ಏಕೆ? ಆಕೆ ಎಷ್ಟೇ ಗೋಗರೆದರೂ ಅದನ್ನು ಕಿವಿಯ ಮೇಲೆ ಹಾಕಿಕೊಳ್ಳದೇ ಇರುವುದು ಅವನ ಹುಚ್ಚುತನ ಅನಿಸುತ್ತದೆ.

—ಎನ್.ಎಸ್. ಚಂದ್ರಶೇಖರ್, ಬೆಂಗಳೂರು